ಅಮ್ಮ ಎಷ್ಟು ದಿನ ನಿನ್ನ ಜತೆ ಇರೋಕೆ ಸಾಧ್ಯ? ಮುಂದೆ ಬದುಕ ಬೇಕಾದವಳು ನೀನು ಅಂತ. ಅವಳು ನಾನು ಹೀಗೇ ಇದ್ದು ಬಿಡ್ತೀನಿ. ನಿನ್ನ ಹೆಂಡ್ತಿಯಾಗಿ ಇರೋಕೆ ನಂಗೂ ಇಷ್ಟವಿಲ್ಲ ಅಂದಳು. ಅವಳಿಗಿನ್ನೂ ಚಿಕ್ಕ ವಯಸ್ಸು. ಕಷ್ಟಗಳು ಗೊತ್ತೇ ಆಗದ ಹಾಗೆ ಅವಳಮ್ಮ ಬೆಳೆಸಿದ್ದಾಳೆ. ಆ ಹುಡುಗನಿಗೆ ಇನ್ನೂ ಕೆಲಸ ಸಿಕ್ಕಿಲ್ಲ. ಸುಚಿತ್ರಾಗೆ ಮದುವೆ ಮಾಡೋ ಜವಾಬ್ದಾರಿ ನನ್ನ ಮೇಲಿದೆ ಎನ್ನುತ್ತ ಅರುಂಧತಿಯ ಮುಖ ನೋಡಿದ. ನೀನಿನ್ನೂ ಯಾಕೆ ಇನ್ನೂ ಮದುವೆ ಆಗಿಲ್ಲ ಅಂತ ಕೇಳಿದಾಗ ಇದನ್ನೆಲ್ಲ ಹೇಳಬೇಕು ಅನ್ನಿಸಿತ್ತು. ಆದರೆ ಹೇಗೆ ಹೇಳುವುದು ಎಂದು ಗೊತ್ತಾಗದೆ ಹೇಳಲಿಲ್ಲ ಎನ್ನುವಾಗ ಅವನ ಗಂಟಲು ಉಬ್ಬಿ ಬಂತು. ಕಣ್ಣುಗಳು ಒದ್ದೆಯಾದವು. ರಸ್ತೆ ಕಲಸಿದಂತೆ ಅಸ್ಪಷ್ಟವಾಯಿತು. ರಸ್ತೆ ಪಕ್ಕದಲ್ಲಿ ಕಾರು ನಿಲ್ಲಿಸಿ ಕಣ್ಣುಗಳನ್ನು ಒರೆಸಿಕೊಂಡ. ಅರ್ಧ ಗಂಟೆ ಇಬ್ಬರೂ ಮಾತಾಡದೆ ಸುಮ್ಮನೆ ಕೂತಿದ್ದರು.

'ಮೂರು ವರ್ಷಗಳ ಹಿಂದೆ ನನ್ನ ಫ್ರೆಂಡೊಬ್ಬರ ಜತೆ ನಿನ್ನ ಬ್ಯಾಂಕಿಗೆ ಬಂದಿದ್ದಾಗ ಮೊದಲ ಸಲ ನಿನ್ನ ನೋಡಿದ್ದೆ. ನೋಡ್ತಿದ್ದಂಗೆ ನೀನು ಇಷ್ಟವಾದೆ. ಪರಿಚಯ ಮಾಡಿಕೊಳ್ಳಬೇಕು ಅಂತಲೇ ನಿಮ್ಮ ಬ್ಯಾಂಕಲ್ಲಿ ಅಕೌಂಟ್ ಓಪನ್ ಮಾಡಿದೆ. ಆರು ತಿಂಗಳಾದರೂ ನಿನ್ನ ಪರಿಚಯ ಆಗಲಿಲ್ಲ. ಒಂದಿನ ನೀನು ಕ್ಯಾಷ್ ಕೌಂಟರಿಗೆ ಬಂದೆ. ಆ ವಾರ ದುಡ್ಡು ಡ್ರಾ ಮಾಡೋಕೆ ಅಂತ ಎರಡು ಸಲ ಬ್ಯಾಂಕಿಗೆ ಬಂದೆ. ನೀವು ನಿನ್ನೆ ಬಂದಿದ್ರಲ್ವ? ಆಗಲೇ ನಿಮಗೆ ಬೇಕಾದಷ್ಟು ಡ್ರಾ ಮಾಡಿಕೊಂಡು ಹೋಗಬಹುದಿತ್ತಲ್ರಿ ಎಂದು ನೀನು ಹೇಳಿದ್ದೆ. ನಿಂಗೆ ಮದುವೆ ಆಗಿದೆಯೋ ಇಲ್ಲವೋ ಅನ್ನೋದು ಗೊತ್ತೇ ಆಗಲಿಲ್ಲ. ನಿನ್ನ ಕತ್ತಲ್ಲಿ ತಾಳಿ ಇರಲಿಲ್ಲ!.

ನಿಂಗೆ ಮದುವೆ ಆಗಿದೆ ಅನ್ನೋದು ಗೊತ್ತಾಗಿ ಮೂರು ತಿಂಗಳು ನಾನು ಬ್ಯಾಂಕಿಗೆ ಬರಲಿಲ್ಲ. ಬೇರೊಬ್ಬನ ಹೆಂಡತಿ ಜತೆ ಸಲುಗೆ ಬೆಳೆಸಿಕೊಳ್ಳೋಕೆ ನನ್ನ ಮನಸ್ಸು ಒಪ್ಪಲಿಲ್ಲ. ಒಂದಿನ ನೀನೇ ಫೋನ್ ಮಾಡಿ ಯಾಕೆ ಸರ್, ಬ್ಯಾಂಕಿಗೆ ಬರ್ತಾ ಇಲ್ಲ? ಆಗಾಗ ಬರ್ತಾ ಇರಿ, ನನಗೊಬ್ಬರು ಜರ್ನಲಿಸ್ಟ್ ಫ್ರೆಂಡ್ ಇದ್ದಾರೆ ಅನ್ನೋದು ನನ್ನ ಕಲೀಗ್‌ಗಳಿಗೆ ಗೊತ್ತಾಗಲಿ ಎಂದು ನೀನು ಹೇಳಿದೆ...' ಎನ್ನುತ್ತ ಅರುಂಧತಿಯ ಮುಖ ನೋಡಿದ. 'ನೀನೇ ನನ್ನ ಫ್ರೆಂಡ್ ಅಂತ ಹೇಳಿದ ಮೇಲೆ ನಿನ್ನ ಜತೆ ಮಾತಾಡೋದರಲ್ಲಿ ತಪ್ಪಿಲ್ಲ ಅನ್ನಿಸ್ತು. ಹಂಗೆ ಶುರುವಾದ ಮಾತು ನಮ್ಮನ್ನು ಇಲ್ಲೀತನಕ ಕರಕೊಂಡು ಬಂದಿದೆ' ಎನ್ನುತ್ತ ಮತ್ತೆ ಅವಳ ಮುಖ ನೋಡಿದ.



'ಅಭಿಗೆ ಡೈವೋರ್ಸ್ ಕೊಡ್ತೀನಿ, ನನ್ನನ್ನು ಮದುವೆ ಆಗ್ತೀಯಾ' ಎಂದು ಸಿದ್ದಾರ್ಥನನ್ನು ಕೇಳಬೇಕು ಅಂತ ಹೊರಡುವಾಗ ಅರುಂಧತಿಗೆ ಅನ್ನಿಸಿತ್ತು. ಮದುವೆ ಆದವಳ ಜತೆ ಸಲುಗೆಯಿಂದ ಇರೋದು ಬೇಡ ಅಂತನ್ನಿಸ್ತು ಅಂದನಲ್ಲ. ಆ ಮಾತು ಅವಳಿಗೆ ಇಷ್ಟವಾಯ್ತು. ಅಭಿಗೆ ಅಂಥ ಗುಣ ಇಲ್ಲವಲ್ಲ ಎಂದೂ ಅನ್ನಿಸಿತು. ತಕ್ಷಣ ಅವಳಿಗೆ ಸುಚಿತ್ರಾ ನೆನಪಾದಳು. ಪಾಪದ ಹುಡುಗಿ. ಅವಳು ಹೇಗಿರಬಹುದು ಎಂದು ಮನಸ್ಸಿನಲ್ಲೇ ಊಹಿಸಿಕೊಳ್ಳಲು ಪ್ರಯತ್ನಿಸಿದಳು. ಸಿದ್ದಾರ್ಥನಿಗಿಂತ ಒಂಬತ್ತು ವರ್ಷ ಚಿಕ್ಕವಳು ಅಂದರೆ ಅವಳಿಗೆ ಇಪ್ಪತ್ತೊಂದೊ, ಎರಡೋ ಇರಬಹುದು. ಅಷ್ಟು ಸಣ್ಣ ವಯಸ್ಸಿನಲ್ಲಿ ಮದುವೆ ಆದರೂ ಗಂಡನ ಜತೆ ಬಾಳದ, ಇಷ್ಟಪಟ್ಟವನ ಜತೆಗೆ ಹೋಗಲೂ ಆಗದ ಸುಚಿತ್ರಾಳ ಬಗ್ಗೆ ಯೋಚಿಸಿದಳು. ಹೆಣ್ಮಕ್ಕಳ ಜೀವನ ಇಷ್ಟೇ ಅನ್ನಿಸಿತು ಅವಳ ಕಣ್ಣಲ್ಲಿ ನೀರು ಬಂತು.

'ಸಾಕು, ಸಿದ್ದಾರ್ಥ್, ಮುಂದೆ ಹೋಗೋದು ಬೇಡ. ವಾಪಸ್ ಹೋಗೋಣ...' ಎನ್ನುತ್ತ ಅವನ ಮುಖ ನೋಡಿದಳು.

●